# ಕಹಿಯುಂಡ ಪ್ರಿಯಾಂಕಾ



**2013** ಮುಗಿದು 2014 ಕಾಲಿಟ್ಟಿದೆ. ಚಿತ್ರೋದ್ಯಮ, ಕಲಾವಿದರು ಕಳೆದ ವರ್ಷದ ತಮ್ಮ ಸಾಧನೆ, ವೈಫಲ್ಯಗಳನ್ನು ಪರಾಮರ್ಶಿಸುವ, ಸರಿ ತಪ್ಪು ಹೆಜ್ಜೆಗಳನ್ನು ಒರೆಗೆ ಹಚ್ಚುವ ಸಮಯವಿದು. ಹೀಗೆ ಸಾಧನೆ ಮತ್ತು ಬದುಕಿನ ಹಿಂಬದಿಯ ಪರದೆ ಸರಿದು ನೋಟ ಹರಿಸಿರುವ ಮಾಜಿ ವಿಶ್ವಸುಂದರಿ ಪ್ರಿಯಾಂಕಾರಿಗೆ ಕಳೆದ ವರ್ಷ ದುಃಖದ ವರ್ಷವಾಗಿ ಕಾಡಿದೆ.

'2013ಕ್ಕಿಂತ ಕೆಟ್ಟ ವರ್ಷ ಇದುವರೆಗೂ ನನ್ನ ಜೀವನದಲ್ಲಿ ಬಂದಿಲ್ಲ' ಎಂದು ಪಿಗ್ಗಿ ಕ್ಯಾಲೆಂಡರ್‌ಅನ್ನು ಶಪಿಸುತ್ತಿದ್ದಾರೆ. ಪಿಗ್ಗಿಯ ಈ ವರ್ಷದ ವೃತ್ತಿ ಬದುಕಿನ ಗ್ರಾಫ್ ನೋಡಿದರೆ ದೊಡ್ಡ ವೈಫಲ್ಯವೇನೂ ಕಾಣುವುದಿಲ್ಲ. ರಾಮ್ ಚರಣ್ ತೇಜಾ ಜೊತೆ ನಟಿಸಿದ 'ಜಂಜೀರ್' ಬಾಕ್ಸಾಫೀಸ್‌ನಲ್ಲಿ ಸೋಲುಂಡರೂ ಪಿಗ್ಗಿ ಅಭಿನಯದ ಬಗ್ಗೆ ಮೆಚ್ಚುಗೆ ವ್ಯಕ್ತವಾಗಿತ್ತು. ಮಿಗಿಲಾಗಿ ತನ್ನ ಮ್ಯೂಸಿಕ್ ಆಲ್ಬಂಗಳ ಮೂಲಕ ಪ್ರಿಯಾಂಕಾ ಬೇರಾವ ನಟಿಯೂ ಮಾಡಿರದ ಸಾಧನೆ ಮಾಡಿದ್ದಾರೆ. ಹೃತಿಕ್ ರೋಷನ್ ನಾಯಕರಾಗಿರುವ 'ಕ್ರಿಶ್ 3' ಬಾಕ್ಸಾಫೀಸ್‌ನಲ್ಲಿ ದೊಡ್ಡ ಗೆಲುವು ಕಂಡಿದೆ. ಆದರೆ ಈ ಗೆಲುವುಗಳ ಸಂಭ್ರಮವನ್ನು ಆ ಕ್ಷಣಕ್ಕೆ ಸೀಮಿತಗೊಳಿಸಿದ್ದಾರೆ ಪ್ರಿಯಾಂಕಾ.

ವೃತ್ತಿ ಜೀವನದಲ್ಲಿ ಗಳಿಸಿದ್ದರೂ, ವೈಯಕ್ತಿಕ ಬದುಕಿನಲ್ಲಿ ಕಳೆದುಕೊಂಡಿದ್ದು ಎಲ್ಲದಕ್ಕಿಂತ ಮಿಗಿಲು ಎಂಬುದು ಅವರ ಅನಿಸಿಕೆ. ತಂದೆ ಅಶೋಕ್ ಚೋಪ್ರಾ ಅಗಲಿಕೆಯ ನೋವನ್ನು ಈಗಲೂ ಪ್ರಿಯಾಂಕಾರಿಗೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ತನ್ನ ಬದುಕಿನ ಗುರು, ಮಾರ್ಗದರ್ಶಿ ಎಲ್ಲವೂ ಆಗಿದ್ದ ತಂದೆಯನ್ನು ಕಳೆದುಕೊಂಡ ನಂತರ ಈ ಯಶಸ್ಸುಗಳೆಲ್ಲವೂ ಶೂನ್ಯ ಎನಿಸಿದ್ದಿದೆಯಂತೆ. 'ಯಶಸ್ಸಿನ ಉತ್ತುಂಗದಲ್ಲಿದ್ದಾಗಲೂ ದುಃಖಿಸುವಂಥ ಈ ಗಳಿಕೆ ನನಗೇ ವಿಚಿತ್ರವೆನಿಸುತ್ತದೆ. ಇದು ಬದುಕಿನ ವ್ಯಂಗ್ಯ' ಎಂದು ನುಡಿವಾಗ ಪ್ರಿಯಾಂಕಾರ ಸದಾ ಅರಳಿರುವ ತುಟಿಗಳ ಮೇಲೆ ವಿಷಾದದ ಛಾಯೆಯೂ ಮೂಡುತ್ತದೆ. ಜೀವನ ಸಂಗಾತಿ ಬೇಕೆನಿಸುವುದಿಲ್ಲವೇ ಎಂದು ಪತ್ರಕರ್ತರು ಪ್ರಶ್ನಿಸಿದರೆ, 'ನಿಜ. ಬದುಕಿಗೊಂದು ಆಸರೆ ಬೇಕು. ಆದರೆ ಅದನ್ನು ಹುಡುಕಲು ನನ್ನಿಂದ ಸಾಧ್ಯವಾಗುತ್ತಿಲ್ಲ. ಸದ್ಯಕ್ಕೆ ನನ್ನ ಕೆಲಸವೇ ನನ್ನ ಸಂಗಾತಿ. ಅದರ ಒಡನಾಟವೇ ಇಷ್ಟ' ಎಂದು ಹುಸಿನಗೆ ಬೀರುತ್ತಾರೆ ಪಿಗ್ಗಿ.

■ ಅಮಿ

